ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ,
ಲಕ್ಷ್ಮೀಪುರಂ, ಮೈಸೂರು – ೫೭೦ ೦೦೪.
ದೂ: (ಕ:) (೦೮೨೧) ೨೪೦೨೧೪೧, ಫ್ಯಾಕ್ಸ್: ೨೪೦೨೧೧೪

J.L.B. Road, Near Ashoka Circle,
Lakshmipuram, Mysore- 570 004
Ph. Off: (0821) 2402141, Fax: 2402114

ಇಮೇಲ್ ಐಡಿ: **musicuniversitymys@gmail.com**

**ದಿನಾಂಕ:26.08.2022**

## 2022–23 ನೇ ಸಾಲಿನ ಪ್ರಶಿಕ್ಷಣ ಸಮಿತಿಯ ವಿಶೇಷ ಸಭೆಯ ನಡವಳಿ

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ **2022–23** ನೇ ಸಾಲಿನ ಪ್ರಶಿಕ್ಷಣ ಸಮಿತಿಯ ಮೊದಲನೇ ವಿಶೇಷ ಸಭೆಯನ್ನು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದಲ್ಲಿ ದಿನಾಂಕ:**26.08.2022** ರ ಶುಕ್ರವಾರದಂದು ಮಧ್ಯಾಹ್ನ **3.00** ಗಂಟೆಗೆ ಜರುಗಿದ್ದು ಸದರಿ ಸಭೆಯ ನಡವಳಿ.

ಸಭೆಯಲ್ಲಿ ಉಪಸ್ಥಿತಿ ಇದ್ದವರು

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಪದನಾಮ |
|---|---|---|
| 01 | **ಪ್ರೊ. ನಾಗೇಶ್ ವಿ. ಬೆಟ್ಟಕೋಟೆ**<br>ಮಾನ್ಯ ಕುಲಪತಿಗಳು<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,<br>**ಮೈಸೂರು.** | ಅಧ್ಯಕ್ಷರು |
| 02 | ಪ್ರಧಾನ ಕಾರ್ಯದರ್ಶಿಯವರು<br>ಆರ್ಥಿಕ ಇಲಾಖೆ, ವಿಧಾನಸೌಧ, 2ನೇ ಮಹಡಿ<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ<br>**ಬೆಂಗಳೂರು–560 001 ಇವರ ಪರವಾಗಿ**<br>**ಶ್ರೀಮತಿ ಉಮಾ .ಕೆ**<br>**ಸರ್ಕಾರದ ಉಪ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ** | ಸದಸ್ಯರು |
| 03 | ನಿರ್ದೇಶಕರು<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ,<br>ಕನ್ನಡ ಭವನ, ಜೆ.ಸಿ.ರಸ್ತೆ.<br>**ಬೆಂಗಳೂರು ಇವರ ಪರವಾಗಿ**<br>**ಶ್ರೀ ವಿ. ಎನ್. ಮಲ್ಲಿಕಾರ್ಜುನ್, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವಿಭಾಗ, ಮೈಸೂರು** | ಸದಸ್ಯರು |
| 04 | **ಶ್ರೀ ಎ. ಎಸ್. ಪ್ರಸನ್ನ ಕುಮಾರ್**<br>#2688, 3 ನೇ ಕ್ರಾಸ್,<br>ಕನಕದಾಸ ನಗರ, ದಟ್ಟಗಳ್ಳಿ,<br>**ಮೈಸೂರು–570 023** | ಸದಸ್ಯರು |
| 05 | **ಶ್ರೀ ಗಣೇಶ ಜೆ. ಕೊಲಂಬಿ**<br>ಶ್ರೀ ಸಂಗಮೇಶ್ವರ ನಾಟ್ಯ ಸಂಘ<br>ಶಿವಮೊಗ್ಗ. | ಸದಸ್ಯರು |

| | | |
|---|---|---|
| 06 | **ಶ್ರೀಮತಿ ರಮ್ಯ ವಶಿಷ್ಟ**<br>ನಂ. 59. ನಿಸರ್ಗ ಅಪಾರ್ಟಮೆಂಟ್<br>ಎಸ್ 3, 10ನೇ ಎ ಮೇನ್<br>17ನೇ ಕ್ರಾಸ್, ಮಲ್ಲೇಶ್ವರಂ<br>**ಬೆಂಗಳೂರು– 56005** | ಸದಸ್ಯರು |
| 07 | **ಶ್ರೀ ಎನ್. ಶ್ರೀನಾಥ್**<br>ಶ್ರೀ ಭಗವತಿ ನಿಲಯ, ನಂ 1475/ಕೆ4<br>3ನೇ ಕ್ರಾಸ್, ತ್ಯಾಗರಾಜ ರಸ್ತೆ<br>ಕತ್ವಾಡಿಪುರ ಅಗ್ರಹಾರ<br>ಕೆ. ಆರ್. ಮೊಹಲ್ಲಾ,<br>**ಮೈಸೂರು– 570024** | ಸದಸ್ಯರು |
| 08 | **ಶ್ರೀ ಮಂಜಪ್ಪ**<br>ನಂ. 52, ಅಯೋದ್ಯಾ ನಗರ<br>ಶ್ರೀರಾಂಪುರ 2ನೇ ಹಂತ<br>ನಾಯ್ಡು ಸ್ಟೋರ್ ಹತ್ತಿರ<br>**ಮೈಸೂರು–570034.** | ಸದಸ್ಯರು |
| 09 | **ಶ್ರೀಮತಿ ಅನುರಾಧ ವಿಕ್ರಾಂತ್**<br>ನಂ 174, ಜಿ ಬ್ಲಾಕ್,<br>9ನೇ ಕ್ರಾಸ್, ಸಹಕಾರ ನಗರ,<br>**ಬೆಂಗಳೂರು – 560092.** | ಸದಸ್ಯರು |
| 10 | **ಶ್ರೀ ವೇಣುಗೋಪಾಲ್**<br>ಬಿನ್ ಬಿ.ಸಿ. ಬಸಪ್ಪ<br>ತುಂಬಸೋಗೆ ಗ್ರಾಮ ಮತ್ತು ಅಂಚೆ<br>ಹೆಚ್.ಡಿ.ಕೋಟೆ ತಾಲ್ಲೂಕು<br>**ಮೈಸೂರು ಜಿಲ್ಲೆ.** | ಸದಸ್ಯರು |
| 11 | **ಪ್ರೊ. ಟಿ.ಎಸ್. ದೇವರಾಜ**<br>**ಕುಲಸಚಿವರು**<br>ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್<br>ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ,<br>**ಮೈಸೂರು.** | ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಉಪಸ್ಥಿತಿ ಇದ್ದವರು**

| | | |
|---|---|---|
| 01 | **ಪ್ರಧಾನ ಕಾರ್ಯದರ್ಶಿಯವರು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬಹುಮಹಡಿಗಳ ಕಟ್ಟಡ, 6ನೇ ಮಹಡಿ<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ,<br>**ಬೆಂಗಳೂರು–560 001** | ಸದಸ್ಯರು |

| | | |
|---|---|---|
| 02 | ಪ್ರಧಾನ ಕಾರ್ಯದರ್ಶಿಯವರು<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ<br>ಡಾ.ಬಿ.ಆರ್. ಅಂಬೇಡ್ಕರ್ ವೀದಿ<br>**ಬೆಂಗಳೂರು-560 00** | ಸದಸ್ಯರು |
| 03 | **ಡಾ. ಆರ್. ವಿ. ರಾಘವೇಂದ್ರ**<br>ನಂ91/2, 4ನೇ ಮೇನ್<br>13ನೇಕ್ರಾಸ್, ಮಲ್ಲೇಶ್ವರಂ<br>**ಬೆಂಗಳೂರು 560003.** | ಸದಸ್ಯರು |

**ಸಭೆಯ ಆರಂಭದಲ್ಲಿ ಮಾನ್ಯ ಸಭಾಧ್ಯಕ್ಷರು ಸಭೆಗೆ ಹಾಜರಾದ ಸದಸ್ಯರುಗಳಿಗೆ ಸ್ವಾಗತ ಕೋರಿದರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು, ಸದರಿ ವಿಷಯವನ್ನು ಕುರಿತು ಸಭೆಯು ಕೂಲಂಕಷವಾಗಿ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಗಳನ್ನು ಕೈಗೊಂಡಿತು.**

| ವಿ. ಸೂ. ಸಂಖ್ಯೆ | ವಿಷಯ ಸೂಚಿ ಮತ್ತು ನಿರ್ಣಯ |
|---|---|
| 01 | ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಮಾದರಿ ಪರಿನಿಯಮಾವಳಿಗಳನ್ನು ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಸರ್ಕಾರವು ಕಳುಹಿಸಿರುವ ಪ್ರಸ್ತಾವ.<br><br>**ನಿರ್ಣಯ:- ವಿಶ್ವವಿದ್ಯಾಲಯಗಳಿಗೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧವಾಗಿ ಸರ್ಕಾರವು ಪತ್ರ ಸಂಖ್ಯೆ: ಇಡಿ 309 ಯುಎನ್ಇ ದಿನಾಂಕ: 26.07.2022 ರಲ್ಲಿ ಸಲ್ಲಿಸಿರುವ ಮಾದರಿ ಪರಿನಿಯಮಾವಳಿಗಳನ್ನು, ಪರಿನಿಯಮಾವಳಿ/ವಿನಿಯಮಾವಳಿ ರಚನಾ ಸಮಿತಿಯ ಸಭೆಯ ಶಿಫಾರಸ್ಸಿನಂತೆ ಪರಿಶೀಲಿಸಿ ಸರ್ಕಾರವು ಸಲ್ಲಿಸಿರುವ ಮಾದರಿ ಪರಿನಿಯಮಾವಳಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ವಿಶ್ವವಿದ್ಯಾಲಯದ ಅಧಿನಿಯಮ 2009 ರ ಕಲಂ 38, 39, 40, ಮತ್ತು 41 ನ್ನು ಸೇರ್ಪಡೆಮಾಡಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಸಮಿತಿಯು ಅನುಮೋದಿಸಿತು.** |
| 02 | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ 15 ಬೋಧಕ ಹುದ್ದೆಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಗತಿಯಲ್ಲಿರುವ ವಿಭಾಗಗಳಿಗೆ ಮರು ಹಂಚಿಕೆ ಮಾಡಿ ಸರ್ಕಾರಕ್ಕೆ ಸಲ್ಲಿಸಿ ನೇಮಕಾತಿ ಮಾಡಲು ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ:- ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಇಡಿ ಯುಆರ್‌ಸಿ 2010, ದಿನಾಂಕ:08.08.2012 ರಲ್ಲಿ ಮಂಜೂರಾಗಿರುವ ವಿವಿಧ 15 ಬೋಧಕ ಹುದ್ದೆಗಳನ್ನು UGC ಯ 12 B ಮಾನ್ಯತೆ ಪಡೆಯಲು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ನಡೆಯುತ್ತಿರುವ ವಿಭಾಗಗಳಿಗೆ ಮರು ಹಂಚಿಕೆ ಮಾಡಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಮಿತಿಯು ಅನುಮೋದಿಸಿತು.** |
| 03 | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧವಾಗಿ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗಳನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಅನುಮೋದನೆ ದೊರಕಿಸಿಕೊಳ್ಳವ |

| | |
|---|---|
| | ಪ್ರಸ್ತಾವ.<br>ನಿರ್ಣಯ:- ವಿಶ್ವವಿದ್ಯಾಲಯದ ವಿವಿಧ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸಮಿತಿಯು ವಿಶ್ವವಿದ್ಯಾಲಯದ ಅಧಿನಿಯಮ 2009 ರ ಕಲಂ 38 ಮತ್ತು 39 ನ್ನು ಹಾಗೂ ಸರ್ಕಾರದ ನಿಯಮಾವಳಿಗಳನ್ನು ಸೇರ್ಪಡೆಮಾಡಿ ಸರ್ಕಾರಕ್ಕೆ ಅನುಮೋದನೆ ಪಡೆಯಲು ಸಮಿತಿಯು ಅನುಮೋದಿಸಿತು. |
| 04 | ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಪ್ರಸಕ್ತ ವರ್ಷದಲ್ಲಿ ನಡೆಸುವ 5 ಮತ್ತು 6 ನೇ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಮತ್ತು ವಿವಿಧ ಡಿಪ್ಲೊಮೋ ಮತ್ತು ಸರ್ಟಿಫಿಕೇಟ್ ಕೋರ್ಸಗಳಲ್ಲಿ ಉತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಮತ್ತು ಪ್ರಸಕ್ತ ವರ್ಷದಲ್ಲಿ ನಡೆಸುವ 5 ಮತ್ತು 6 ನೇ ಘಟಿಕೋತ್ಸವಕ್ಕೆ ಘನತವೆತ್ತ ರಾಜ್ಯಪಾಲರಿಗೆ ಆಹ್ವಾನ ನೀಡುವ ಪ್ರಸ್ತಾವ.<br><br>ನಿರ್ಣಯ :- ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು 2020-21 ನೇ ಸಾಲಿನ ಘಟಿಕೋತ್ಸವನ್ನು ಆಯೋಜಿಸಲು ಈ ಹಿಂದೆ ವಿಶ್ವವಿದ್ಯಾಲಯದಲ್ಲಿ ಜರುಗಿದ ಪ್ರಶಾಸನ ಸಮಿತಿ ಸಭೆಯು ಅನುಮೋದಿಸಿತು. ಆದರೆ ಕೊವೀಡ್ ಸಾಂಕ್ರಮಿಕ ರೋಗದ ಹಿನ್ನೆಲೆಯಲ್ಲಿ 2020-21 ನೇ ಸಾಲಿನ ಘಟಿಕೋತ್ಸವನ್ನು ಆಯೋಜಿಸಲು ಸಾಧ್ಯವಾಗಿರುವುದಿಲ್ಲ. ಪ್ರಸಕ್ತ ವರ್ಷದಲ್ಲಿ ನಡೆಸುವ 5 ಮತ್ತು 6 ನೇ ಘಟಿಕೋತ್ಸವಕ್ಕೆ ಘನತವೆತ್ತ ರಾಜ್ಯಪಾಲರಿಗೆ ಆಹ್ವಾನ ನೀಡಲು ಮತ್ತು ಇನ್ನಿತರ ಪ್ರಕ್ರಿಯೆಗಳನ್ನು ಕೈಗೊಳ್ಳಲು ಹಾಗೇಯೆ ಅಂದಾಜು ವೆಚ್ಚ ರೂ.20 ಲಕ್ಷಗಳನ್ನು ಭರಿಸಲು ಸಭೆಯು ಅನುಮೋದಿಸಿತು.<br>ವಿವಿಧ ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಲು ನಿಯಮಾನುಸಾರ ದರಪಟ್ಟಿ / ಟೆಂಡರ್ ಆಹ್ವಾನಿಸಿ ಕ್ರಮವಹಿಸುವಂತೆ ಸಭೆಯು ಸೂಚಿಸಿ ಅನುಮೋದಿಸಿತು. |
| 05 | ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಖಾಸಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಸರ್ಟಿಫಿಕೇಟ್, ಡಿಪ್ಲೊಮೋ ಪಿ ಜಿ ಡಿಪ್ಲೊಮೋ ಕೋರ್ಸು ಮತ್ತು ಒಂದು ವರ್ಷದ ಡಿಪ್ಲೊಮೋ ಕೋರ್ಸುಗಳನ್ನು ಪ್ರಾರಂಭಿಸುವ ಕುರಿತು.<br>ನಿರ್ಣಯ:- ಸರ್ಕಾರದ ಪತ್ರ ಸಂಖ್ಯೆ: ಇಡಿ 157 ಯುಎನ್‌ಇ 2021 ದಿನಾಂಕ:25.07.2022 ರ ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಖಾಸಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಸರ್ಟಿಫಿಕೇಟ್, ಡಿಪ್ಲೊಮೋ ಪಿ ಜಿ ಡಿಪ್ಲೊಮೋಕೋರ್ಸು ಮತ್ತು ಒಂದು ವರ್ಷದ ಡಿಪ್ಲೊಮೋ ಕೋರ್ಸುಗಳನ್ನು ಪ್ರಾರಂಭಿಸುವ ಕುರಿತು ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಪರಿನಿಯಮಾವಳಿಯನ್ನು ರಚಿಸಿಕೊಂಡು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿರುವ ಪ್ರಸ್ತಾವನೆಯನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ಹಾಗೂ ಪರಿನಿಯಮಾವಳಿ/ವಿನಿಯಮಾವಳಿ ರಚನಾ ಸಮಿತಿಯ ಸಭೆಯ ಶಿಫಾರಸ್ಸಿನಂತೆ ಪರಿನಿಯಮಾವಳಿಯಲ್ಲಿ ಯಾವುದೇ ನೇಮಕಾತಿ ಹಾಗೂ ಇತರೆ ನಿಯಮಗಳಿಗೆ ಸಂಬಂಧವಿಲ್ಲದ ಕಾರಣ ಸದರಿ ಪರಿನಿಯಮಾವಳಿಯು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಹಾಗೂ ಹೊಸದಾಗಿ ಜಾರಿಗೆ ಬಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಗೆ ಪೂರಕವಾಗಿರುವುದರಿಂದ ಸದರಿ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ಸಮಿತಿಯು ಅನುಮೋದಿಸಿತು. |

| | |
|---|---|
| 06 | ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಆರು ತಿಂಗಳ ಅವಧಿಗೆ ಮುಂದುವರಿಸುವ ಪ್ರಸ್ತಾವ.<br><br>**ನಿರ್ಣಯ:- ಕರ್ನಾಟಕ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಮುಂದುವರಿಸುವ ಕುರಿತು ಸಭೆಯು ಕೂಲಂಕಷವಾಗಿ ಚರ್ಚಿಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ತರಗತಿಗಳನ್ನು ವಿಶ್ವವಿದ್ಯಾಲಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಕಾರ್ಯಭಾರಕ್ಕೆ ಅನುಗುಣವಾಗಿ ಆರು ತಿಂಗಳ ಅವಧಿಗೆ ಮುಂದುವರಿಕೆ ಆದೇಶ ನೀಡಲು ಸಭೆಯು ಅನುಮೋದಿಸಿತು.** |
| 07 | ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇನ್ನಿತರೆ ಮೂಲಗಳಿಂದ ಸಹಾಯಾನುದಾನ / ವೇತನಾನುದಾನ ಪಡೆಯುತ್ತಿರುವ ಸಂಗೀತಾದಿ ಮತ್ತು ಪ್ರದರ್ಶಕ ಕಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸರ್ಟಿಫಿಕೇಟ್ ಮತ್ತು ಡಿಪ್ಲೊಮೋ ಕೋರ್ಸುಗಳನ್ನು ನಡೆಸಲು ಅನುಮತಿ ನೀಡುವ ಪ್ರಸ್ತಾವ.<br><br>**ನಿರ್ಣಯ:- ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇನ್ನಿತರೆ ಮೂಲಗಳಿಂದ ಸಹಾಯಾನುದಾನ/ವೇತನಾನುದಾನ ಪಡೆಯುತ್ತಿರುವ ಸಂಗೀತಾದಿ ಮತ್ತು ಪ್ರದರ್ಶಕ ಕಲೆಗಳನ್ನು ನಡೆಸುತ್ತಿರುವ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸರ್ಟಿಫಿಕೇಟ್ ಮತ್ತು ಡಿಪ್ಲೊಮೋ ಕೋರ್ಸುಗಳನ್ನು ನಡೆಸಲು ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು.** |
| 08 | **ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು** |
| 8.1 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ Post Graduate Diploma Program in Performing Arts ಕೋರ್ಸಿನ ಕರಡು ವಿಯಮಾವಳಿಗೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಮಾನ್ಯ ಕುಲಪತಿಯವರ ಹಾಗೂ ಕುಲಸಚಿವರ ಸಹಿಯೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ತ್ರಿಪ್ರತಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ಪಡೆಯುವ ಪ್ರಸ್ತಾವ.<br><br>**ನಿರ್ಣಯ:- ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ Post Graduate Diploma Program in Performing Arts ಕೋರ್ಸಿನ ಕರಡು ವಿಯಮಾವಳಿಗೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಮಾನ್ಯ ಕುಲಪತಿಯವರ ಹಾಗೂ ಕುಲಸಚಿವರ ಸಹಿಯೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ತ್ರಿಪ್ರತಿಯಲ್ಲಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದಿಸಿತು.** |
| 8.2 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಶುಲ್ಕಗಳನ್ನು ಪರಿಷ್ಕರಣೆ ಮಾಡುವ ಪ್ರಸ್ತಾವ.<br><br>**ನಿರ್ಣಯ:- ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಶುಲ್ಕಗಳನ್ನು ಪರಿಷ್ಕರಣೆ** |

| | |
|---|---|
| | ಮಾಡಲು ಶುಲ್ಕ ಪರಿಷ್ಕರಣೆ ಸಮಿತಿಯನ್ನು ರಚಿಸಿ ಶುಲ್ಕ ಪರಿಷ್ಕರಣೆ ಮಾಡಲು ಸಭೆಯು ಒಪ್ಪಿಗೆ ಸೂಚಿಸಿತು. |
| 8.3 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ Post Financial Education and Investment Awareness Course ಅನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸುವ ಪ್ರಸ್ತಾವ.<br><br>**ನಿರ್ಣಯ:- ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ Post Financial Education and Investment Awareness Course ಅನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| 8.4 | ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಸರ್ಟಿಫಿಕೇಟ್, ಡಿಪ್ಲೊಮೋ ಮತ್ತು ಅಲ್ಪಾವಧಿ ಕೋರ್ಸುಗಳನ್ನು ಹಾಗೂ ಜೂನಿಯರ್ ಮತ್ತು ಸಿನಿಯರ್ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸಾಧಕ ಬಾಧಕಗಳನ್ನು ಅಧ್ಯಯನ ಮಾಡಲು ಸಲಹಾ ಸಮಿತಿಯನ್ನು ರಚಿಸುವ ಪ್ರಸ್ತಾವ.<br><br>**ನಿರ್ಣಯ:- ವಿಶ್ವವಿದ್ಯಾಲಯದಲ್ಲಿ ಸರ್ಟಿಫಿಕೇಟ್, ಡಿಪ್ಲೊಮೋ, ಅಲ್ಪಾವಧಿ ಕೋರ್ಸುಗಳನ್ನು ಹಾಗೂ ಜೂನಿಯರ್ ಮತ್ತು ಸಿನಿಯರ್ ಕೋರ್ಸುಗಳನ್ನು ಪ್ರಾರಂಭಿಸುವ ಸಲುವಾಗಿ ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರು ಪ್ರಸ್ತಾಪಿಸಿ, ಚರ್ಚಿಸಿ ನೀಡಿದ ಸಲಹೆಯಂತೆ ಸರ್ಟಿಫಿಕೇಟ್, ಡಿಪ್ಲೊಮೋ, ಅಲ್ಪಾವಧಿ ಕೋರ್ಸುಗಳನ್ನು ಹಾಗೂ ಜೂನಿಯರ್ ಮತ್ತು ಸಿನಿಯರ್ ಕೋರ್ಸುಗಳನ್ನು ಪ್ರಾರಂಭಿಸುವ ಹಾಗೂ ಸದರಿ ಕೋರ್ಸುಗಳ ಪಠ್ಯ ಕ್ರಮಗಳನ್ನು ರಚಿಸುವ ಮತ್ತು ಸಾಧಕ ಬಾಧಕಗಳನ್ನು ಅಧ್ಯಯನ ಮಾಡಲು ಸಲಹಾ ಸಮಿತಿಯನ್ನು ರಚಿಸುವುದು ಸೂಕ್ತವೆಂದು ಸಭೆಯು ಸೂಚಿಸಿ ಸಲಹಾ ಸಮಿತಿಯನ್ನು ಹಾಗೂ ಪಠ್ಯ ರಚನಾ ಸಮಿತಿಗಳನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಿತು.** |

ಅಂತಿಮವಾಗಿ ಸಭೆಯ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರು ಸಭೆಯನ್ನು ಯಶಸ್ವಿಗೊಳಿಸಿದ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಕುಲಸಚಿವರು | ಕುಲಪತಿ |
| ಪದನಿಮಿತ್ತ ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |
| ಪ್ರಶಿಕ್ಷಣ ಸಮಿತಿ | ಪ್ರಶಿಕ್ಷಣ ಸಮಿತಿ |